REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No. PMG/BG/WPP-CO -1 /2021-2023
Posted at BANGALORE PSO, MYSORE ROAD,
BANGALORE – 560026

Date of Publication on: 14th June
Permitted to post on 15th/16th June 2023

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ: ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30; ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 36 ಜೂನ್ 2023 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 06

## ಕರ್ನಾಟಕ ಆರ್ಯವೈಶ್ಯ ಮಹಾಸಭೆ (ರಿ)

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009



## ಆತ್ಮೀಯ ಆಮಂತ್ರಣ

★★★

ಮೈಸೂರು ನಗರ, ಗೀತಾಮಂದಿರ ರಸ್ತೆ, ಸಂಖ್ಯೆ **2936/2** ರಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ

# ವಾಸವಿ ಭವನ

## ಉದ್ಘಾಟನಾ ಸಮಾರಂಭ

**ದಿನಾಂಕ 25–6–2023 ಭಾನುವಾರ ಬೆಳಿಗ್ಗೆ 10.45ಕ್ಕೆ**

ಭವನದ ಉದ್ಘಾಟನೆ ಸ್ಥಳ : ಸಂಖ್ಯೆ **2936/2** ಗೀತಾಮಂದಿರ ರಸ್ತೆ, ಮೈಸೂರು

ಕಾರ್ಯಕ್ರಮದ ಸ್ಥಳ : ಕರ್ನಾಟಕ ಕಲಾಮಂದಿರ, ಮೈಸೂರು



ದಿವ್ಯ ಸಾನಿಧ್ಯ ಹಾಗೂ ಜ್ಯೋತಿ ಆರಾಧನೆ : ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳು
ಪೀಠಾಧಿಪತಿಗಳು: ಶ್ರೀ ವಾಸವೀ ಪೀಠ

ವಾಸವಿ ಭವನ ಉದ್ಘಾಟನೆ : ಶ್ರೀ ಡಿ ಹೆಚ್ ಶಂಕರಮೂರ್ತಿ, ಮಾಜಿ ಸಭಾಪತಿಗಳು, ವಿಧಾನಪರಿಷತ್

ಸಮಾರಂಭದ ಉದ್ಘಾಟನೆ : ಶ್ರೀ ಪ್ರತಾಪ್‌ಸಿಂಹ, ಮಾನ್ಯ ಸಂಸದರು, ಮೈಸೂರು–ಕೊಡಗು ಜಿಲ್ಲೆ

ವಿದ್ಯಾರ್ಥಿನಿಲಯ ಉದ್ಘಾಟನೆ : ಶ್ರೀ ಹೆಚ್ ಪಿ ಮಂಜುನಾಥ್, ಮಾಜಿ ಶಾಸಕರು, ಹುಣಸೂರು

### ಮುಖ್ಯ ಆಹ್ವಾನಿತರು

| ಶ್ರೀ ಕೆ ಹರೀಶ್ ಗೌಡ | ಶ್ರೀ ಶ್ರೀವತ್ಸ | ಶ್ರೀ ಡಿ ಎಸ್ ಅರುಣ್ | ಶ್ರೀ ಶಿವಕುಮಾರ್ |
|---|---|---|---|
| ಶಾಸಕರು, ಚಾಮರಾಜ ಕ್ಷೇತ್ರ, ಮೈಸೂರು | ಶಾಸಕರು, ಕೃಷ್ಣರಾಜ ಕ್ಷೇತ್ರ, ಮೈಸೂರು | ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಮೇಯರ್, ಮೈಸೂರು ನಗರ ಪಾಲಿಕೆ |

### ಅಧ್ಯಕ್ಷತೆ:

ಆರ್ ಪಿ ರವಿಶಂಕರ್
ಅಧ್ಯಕ್ಷರು: ಕರ್ನಾಟಕ ಆರ್ಯವೈಶ್ಯ ಮಹಾಸಭಾ

**ತಮಗೆ ಆದರದ ಸ್ವಾಗತ**

# ಅಭಿನಂದನೆಗಳು



ಶ್ರೀ ಟಿ. ಶೇಷಾಚಲಪತಿ

ಆರ್ಯವೈಶ್ಯ ಸಮಾಜದ ಶ್ರೀ ಟಿ. ಶೇಷಾಚಲಪತಿ ಅವರು ಬಹುಮುಖ ಪ್ರತಿಭೆಯಾಗಿದ್ದು ಸಾಮಾಜಿಕ, ಶೈಕ್ಷಣಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ಶ್ರೀಯುತ ಶೇಷಾಚಲಪತಿಯವರು ಸೈಕ್ಲೋಥಾನ್ ಮ್ಯಾರಥಾನ್ ಮತ್ತು ಸ್ವಿಮ್ಮಿಂಗ್ ಮೂರರಲ್ಲಿ ತೊಡಗಿಸಿಕೊಳ್ಳುವ ಮೂಲಕ **ಟ್ರೈಲಾಥಾನ್ ಪಂಟರ್** ಆಗಿದ್ದಾರೆ. ಇಷ್ಟಲ್ಲದೆ ಎತ್ತರದ ಕಟ್ಟಡದಲ್ಲಿರುವ ಮೆಟ್ಟಿಲುಗಳನ್ನು ಹತ್ತುವ ವರ್ಟಿಕಲ್ ಮ್ಯಾರಥಾನ್ ಸ್ಪರ್ಧೆಯಲ್ಲೂ ಸಾಧನೆ ಮಾಡಿರುವ 70 ವರ್ಷ ದಾಟಿದ ಶೇಷಾಚಲಪತಿಯವರು ಇಂದಿಗೂ ವಾರಕ್ಕೊಮ್ಮೆ 50ರಿಂದ 100 ಕಿ.ಮೀ ವರೆವಿಗೂ ಸೈಕ್ಲಿಂಗ್ ಮಾಡುತ್ತಾರೆ. ಇತ್ತೀಚೆಗೆ ಆಸ್ಟ್ರೇಲಿಯಾದ ಗೋಲ್ಡ್ ಕೋಸ್ಟಾದಲ್ಲಿ ನಡೆದ ಪ್ಯಾನ್ ಫೆಸಿಫಿಕ್ ಮಾಸ್ಟರ್ ಗೇಮ್ಸ್ ನಲ್ಲಿ ಭಾಗವಹಿಸಿ **3000 ಕಿ.ಮೀ ರೇಸ್ ವಾಕ್ ಸ್ಪರ್ಧೆಯಲ್ಲಿ ಕಂಚಿನ ಪದಕ** ಗೆದ್ದು ಕ್ರೀಡಾ ಕ್ಷೇತ್ರದಲ್ಲಿ ಭಾರತ ದೇಶದ ಗೌರವವನ್ನು ಎತ್ತಿಹಿಡಿದಿದ್ದಾರೆ.

ಶ್ರೀ ಟಿ. ಶೇಷಾಚಲಪತಿರವರ ಸಾಧನೆಯನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

# ಬಡವರ ಮನೆಯ ಬೆಳಕು ಉದ್ಯೋಗ ಮಿತ್ರ

## ಪದವಿಪೂರ್ವ ವಿದ್ಯಾರ್ಥಿಗಳಿಗೆ–ವಿಶೇಷ ಕೋರ್ಸುಗಳು

## ಉಚಿತ ತರಬೇತಿ ಮತ್ತು ಉದ್ಯೋಗ

ಸಮಾಜದ ಸರ್ವಾಂಗೀಣ ಅಭಿವೃದ್ಧಿಗಾಗಿ ವರ್ಷವಿಡೀ ವಿನೂತನ ಕಾರ್ಯಕ್ರಮಗಳ ಮೂಲಕ ಬಡ ಜನತೆಯ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಮಹಾಸಭೆ ಪಿ.ಯು.ಸಿ ಹಾಗೂ ನಂತರದ ವಿದ್ಯಾರ್ಥಿಗಳ ಭವಿಷ್ಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು, ಬಡ ಜನತೆಯ ಕುಟುಂಬಗಳಲ್ಲಿ ಬಡತನದ ಕತ್ತಲನ್ನು ನೀಗಿಸಿ–ಸಮಾಧಾನದ ಬೆಳಕನ್ನು ಬೆಳಗಿಸುವ ಹೊಸ ಯೋಜನೆ ಉದ್ಯೋಗ ಮಿತ್ರ ದಿನಾಂಕ: 12–3–2023ರಂದು ಲೋಕಾರ್ಪಣೆ ಮಾಡಿದೆ.

ಉದ್ಯೋಗ ಮಿತ್ರ–ಬೆಂಗಳೂರು ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿರುವ ಗುಪ್ತಾ ಎಜುಕೇಷನ್ ಸೊಸೈಟಿಯವರ ಸಹಯೋಗದೊಂದಿಗೆ ವರ್ಷಪೂರ್ತಿ ಬ್ಯಾಚ್‌ಗಳ ಆಧಾರದಲ್ಲಿ ವಿಶೇಷ ತಾಂತ್ರಿಕ ಕೋರ್ಸುಗಳನ್ನು 4 ತಿಂಗಳುಗಳ ಕಾಲ ಕಲಿಸಿ, ಅರ್ಹ ವಿದ್ಯಾರ್ಥಿಗಳಿಗೆ ಶೇ 100 ರಷ್ಟು **ಉದ್ಯೋಗದ ಖಾತ್ರಿ** ನೀಡಲಾಗಿದೆ. ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭೆಯ ಪೂರ್ಣ ಸಹಕಾರದೊಂದಿಗೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

## ಉದ್ಯೋಗ ಮಿತ್ರ–ಫಲಾನುಭವಿಗಳು ಯಾರು?



1. ಕರ್ನಾಟಕ ರಾಜ್ಯದಲ್ಲಿ ನೆಲೆಸಿರುವ ಬಡ ಆರ್ಯವೈಶ್ಯ ವಿದ್ಯಾರ್ಥಿ/ವಿದ್ಯಾರ್ಥಿನಿಯರು
2. ಕನಿಷ್ಠ ವಿದ್ಯಾರ್ಹತೆ ಪಿ.ಯು.ಸಿ/ಡಿಪ್ಲೋಮ/ ಹಾಗೂ ಮುಂದುವರೆದು ಓದಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು
3. ವಯೋಮಿತಿ ಕನಿಷ್ಠ 20–30 ಮಾತ್ರ.
4. ಇಂಗ್ಲೀಷ್ ಮಾಧ್ಯಮದ ಶಿಕ್ಷಣ–ಕನಿಷ್ಠ ಇಂಗ್ಲೀಷ್ ಅರ್ಥವಾಗುವಂತಿರಬೇಕು.
5. 4 ತಿಂಗಳ ಕೋರ್ಸುಗಳನ್ನು ಬೆಂಗಳೂರು ನಗರದ ಜಯನಗರದಲ್ಲಿ ನಡೆಸಲಾಗುತ್ತದೆ.
6. ಆಯ್ಕೆಯಾಗಿರುವ ವಿದ್ಯಾರ್ಥಿಗಳು ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.

## 2ನೇ ಬ್ಯಾಚ್ ಉದ್ಯೋಗ ಮಿತ್ರ 2023, ಆಗಸ್ಟ್‌ನಿಂದ ಪ್ರಾರಂಭ

**ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳಿಗೆ ಅವಕಾಶ ಇರುವುದಿಲ್ಲ**

1. ಕೋರ್ಸುಗಳಿಗೆ ಅರ್ಹತೆ ಪಡೆದಿರುವ ಹೊರ ಊರಿನ ವಿದ್ಯಾರ್ಥಿಗಳಿಗೆ ಸಾಮಾನ್ಯ ವಸತಿ, ಊಟೋಪಚಾರದ ವ್ಯವಸ್ಥೆ ಉಚಿತವಾಗಿರುತ್ತದೆ.
2. ಒಬ್ಬ ವಿದ್ಯಾರ್ಥಿಯು ಒಂದು ಕೋರ್ಸಿಗೆ ಮಾತ್ರ ಅರ್ಹತೆ ಪಡೆದಿರುತ್ತಾರೆ.
3. ಕೋರ್ಸುಗಳಿಗೆ ಅರ್ಹತೆ ಪಡೆದಿರುವ ವಿದ್ಯಾರ್ಥಿಗಳು ತಮ್ಮ ಎಸ್.ಎಸ್.ಎಲ್.ಸಿ/ಪಿ.ಯು.ಸಿ ಇತರ ಅಂಕಪಟ್ಟಿಗಳ ಮೂಲ ಪ್ರತಿಗಳನ್ನು ತಮ್ಮ ಕೋರ್ಸುಗಳು ಪೂರ್ಣ ಮುಗಿಸುವವರೆವಿಗೂ ಸ್ವಇಚ್ಛೆಯಿಂದ ಮಹಾಸಭೆಯ ಸುಪರ್ದಿಗೆ ನೀಡಿರಬೇಕು.
4. ಅರ್ಹತೆ ಪಡೆದಿರುವ ವಿದ್ಯಾರ್ಥಿಗಳು ಅಶಿಸ್ತಿನಿಂದ ವರ್ತಿಸಿದಲ್ಲಿ ಅವರನ್ನು ಕೋರ್ಸುಗಳಿಂದ ಹೊರಗೆ ಕಳುಹಿಸುವ ಪೂರ್ಣ ಅಧಿಕಾರ ಮಹಾಸಭೆ ಹೊಂದಿರುತ್ತದೆ.
5. ಅನಿವಾರ್ಯ ಸಂದರ್ಭಗಳಲ್ಲಿ ಕೋರ್ಸುಗಳನ್ನು ಮುಂದೂಡುವ/ರದ್ದುಗೊಳಿಸುವ ಪೂರ್ಣ ಅಧಿಕಾರ ಮಹಾಸಭೆಯದ್ದಾಗಿರುತ್ತದೆ.
6. ಆರೋಗ್ಯವಂತ ಮತ್ತು ಯಾವುದೇ ದುಶ್ಚಟಗಳಿಂದ ಮುಕ್ತರಾಗಿರುವ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ.

## ಮೈಸೂರು – ಬೆಂಗಳೂರು

# ವೈಶ್ಯ ಹಾಸ್ಟೆಲ್‌ಗೆ ಅರ್ಜಿ

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಸುಸಜ್ಜಿತ ವೈಶ್ಯ ಹಾಸ್ಟೆಲ್‌ಗಳಿಗೆ 2023–24ನೇ ಸಾಲಿನ ಕಾಲೇಜು ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಹಾಸಭೆ ವೆಬ್‌ಸೈಟ್‌ನಲ್ಲಿ ಅರ್ಜಿಗಳನ್ನು ಪಡೆದುಕೊಳ್ಳಬಹುದು.

**ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 30–07–2023**

**ವೆಬ್‌ಸೈಟ್: www.kavms.com**

ವಿ.ಸೂ.
ನೋಂದಣಿ ಶುಲ್ಕ ರೂ 100/–ನ್ನು ಪಾವತಿ ಮಾಡಲು ನಗದು / ಚೆಕ್ ಅಥವಾ ಬ್ಯಾಂಕ್ ಖಾತೆಯ QR CODE ಅನ್ನು ಬಳಸಿ

ಅರ್ಜಿಗಳನ್ನು ಭರ್ತಿ ಮಾಡಿ ಅವಶ್ಯ ದಾಖಲೆಗಳೊಂದಿಗೆ ಮತ್ತು ನೋಂದಾವಣೆ ಶುಲ್ಕ ರೂ 100/– ರೊಂದಿಗೆ ಮಹಾಸಭೆ ಕಛೇರಿಗೆ ಕಳುಹಿಸಿಕೊಡಲು ಕೋರಿದೆ.

**ಮೈಸೂರು ಹಾಸ್ಟೆಲ್ ವಿದ್ಯಾರ್ಥಿನಿಯರಿಗೆ ಪ್ರವೇಶವಿದೆ**

ವಿವರಗಳಿಗೆ ಸಂಪರ್ಕಿಸಿ: 080–22206151/52, 9663900439

## ಅಧ್ಯಕ್ಷರ ನುಡಿ

# ಮಾತೂ..... ನಿಮ್ಮದೇ, ಸಂಬಂಧಗಳೂ... ನಿಮ್ಮದೇ, ಜಾಗ್ರತೆಯಿರಲಿ!!!!

### ನುಡಿದರೆ ಮುತ್ತಿನ ಹಾರದಂತಿರಬೇಕು
### ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು
### ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು

ಎಂಬ ಶರಣವಾಣಿ ಅಚಂದ್ರಾರ್ಕವಾದದ್ದು. ಪ್ರತಿಯೊಬ್ಬರ ಕಿವಿಗಳಲ್ಲಿ ಈ ಅಮೃತವಾಣಿ ನಿರಂತರ ಪ್ರತಿಧ್ವನಿಸುತ್ತಲೇ ಇರಬೇಕು. ಮನಸಿನ ಭಾವನೆಗಳನ್ನು, ಕಾಮನೆಗಳನ್ನು ಹಂಚಿಕೊಳ್ಳಲು ಕೇವಲ ಮಾನವನಿಗೆ ಮಾತ್ರ ಭಗವಂತನು ಕರುಣಿಸಿರುವ ಅದ್ಭುತ ಶಕ್ತಿ **ಮಾತು. ನಮ್ಮ ಮಾತುಗಳು ಹೃದಯಗಳನ್ನು ಬೆಸೆಯಲು ಮತ್ತು ಮನಸುಗಳನ್ನು ಅರಳಿಸಲು ಪೂರಕವಾಗಿರಬೇಕು.** ಒಂದೊಳ್ಳೆ ಮಾತಿನಿಂದ ಏಕಕಾಲದಲ್ಲಿ ಅಸಂಖ್ಯಾತ ಹೃದಯಗಳನ್ನು ಮುಟ್ಟಲು ಸಾಧ್ಯ, ಅಂತೆಯೇ ಒಂದೇ ಒಂದು ಒರಟು ಮಾತು ಅಸಂಖ್ಯಾತ ಭಾಂದವ್ಯಗಳಿಗೂ ಮುಳುವಾಗಲೂಬಹುದು, ಅದಕ್ಕೆ ಹಿರಿಯರು ಹೇಳುವುದು **ಮಾತೇ ಮುತ್ತು, ಮಾತೇ ಮೃತ್ಯು. ಬಾಯಿಂದ ಹೊರಟ ಮಾತು, ಬಿಟ್ಟ ಬಾಣದಂತೆ, ಒಮ್ಮೆ ಚಿಮ್ಮಿದ ಮೇಲಾಯ್ತು ಮತ್ತೆ ಹಿಂದಿರುಗಲಾಗದು,** ಹಾಗಾಗಿ ಆಡಬೇಕಾದ ಮಾತನ್ನು ಗಮನವಿಟ್ಟು, ಸಂದರ್ಭ ಅರಿತು, ಪರಿಣಾಮವನ್ನು ಮುಂದಾಲೋಚಿಸಿ ಹದದಲ್ಲಿ ಮಾತನಾಡಿದರೆ ಮಾತುಗಳಿಗೆ ಅರ್ಥವಿರುತ್ತದೆ. **ಕುಂಭಕರ್ಣನು ಬ್ರಹ್ಮನಲ್ಲಿ ವರ ಕೇಳುವಾಗ ಇಂದ್ರಾಸನವನ್ನು ನೀಡು** ಎನ್ನುವ ಬದಲು, ತಪಸಿನ ಆಯಾಸದಲ್ಲಿ ಕ್ಷಣಕಾಲ ಮೈ ಮರೆತು ನಿದ್ರಾಸನವನ್ನು ನೀಡು ಎಂದು ಕೋರಿಬಿಟ್ಟ, ಒಂದೊಳ್ಳೆ ಅವಕಾಶ, ಕೇವಲ ಮಾತಿನಿಂದಾದ ತಪ್ಪಿಗೆ ಇಂದಿಗೂ ಜೋರು ನಿದ್ದೆ ಮಾಡುವವರನ್ನು ಕುಂಭಕರ್ಣನಿಗೆ ಹೋಲಿಸಲಾಗುತ್ತದೆ ಅಲ್ಲವೇ? **ಮಾತು** ನಮ್ಮ ವ್ಯಕ್ತಿತ್ವದ ಸತ್ವವನ್ನು, ಸಾಮರ್ಥ್ಯಗಳನ್ನು, ನಮ್ಮ ಗುಣ–ಅವಗುಣಗಳನ್ನು, ಸ್ವಭಾವ ವರ್ತನೆಗಳ ಮೂಲಕ ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. **ಮನುಷ್ಯನನ್ನು ಅಂದಗೊಳಿಸುವುದು ಒಡವೆ ವಸ್ತ್ರಗಳಲ್ಲ, ಸೌಂದರ್ಯ ಪ್ರಸಾಧನ ಲೇಪನಗಳಂತೂ ಅಲ್ಲವೇ ಅಲ್ಲ, ಕೇಶಾಲಂಕಾರದ ಹೂಗಳೂ ಅಲ್ಲ, ಕೇವಲ ಶುದ್ದ ಹೃದಯದ, ಸನ್ನಡತೆಯ ಮಾತು.**

ಒಬ್ಬೊಬ್ಬ ವ್ಯಕ್ತಿ ಒಂದೊಂದು ರೀತಿ ಮಾತನಾಡುತ್ತಾನೆ. ಕೆಲವರು ತಿಳಿದು ಮಾತನಾಡುತ್ತಾರೆ. ಇನ್ನೂ ಕೆಲವರು ತಿಳಿದವರಂತೆ ಮಾತನಾಡುತ್ತಾರೆ. ಕೆಲವರು ಅನುಭವದಿಂದ ಮಾತನಾಡಿದರೆ, ಇನ್ನೂ ಕೆಲವರು ಅನುಮಾನದಿಂದ ಮಾತನಾಡುತ್ತಾರೆ. ಕೆಲವರು ಮಾತನಾಡುವಾಗ ಯಾರೋ ಹೇಳಿದರು, ಎಲ್ಲೋ ಓದಿದಂತೆ, ಎಲ್ಲೋ ಕೇಳಿದಂತೆ ಎಂದು ಹೇಳಿ ಮಾತನಾಡುತ್ತಾರೆ. ಇಂತಹ ಅನವಶ್ಯಕ ಮಾತುಗಳಿಂದ ಸಮಯವೂ ವ್ಯರ್ಥ–ಕೆಲವೊಂದು ಸಂದರ್ಭಗಳಲ್ಲಿ ಸಂಬಂಧಗಳಿಗೂ ಧಕ್ಕೆ ಆಗುವ ಸಾಧ್ಯತೆಗಳು ಹೆಚ್ಚು. ಅಂತಹವರಿಗಾಗಿಯೇ ದಾಸ ಶ್ರೇಷ್ಟ ಪುರಂದರದಾಸರು ಹೇಳಿರುವುದು ಮತಿಯಿಲ್ಲದೆ ಮಾತನಾಡುವ, ಚಾಡಿ, ಸುಳ್ಳುಗಳನ್ನು ಹೆಣೆಯುವ ನಾಲಿಗೆಗೆ **ಆಚಾರವಿಲ್ಲದ ನಾಲಿಗೆ, ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ, ವಿಚಾರವಿಲ್ಲದೆ, ಪರರ ದೂಷಿಸುವುದಕ್ಕೆ ಚಾಚಿ ಕೊಂಡಿರುವ ನಾಲಿಗೆ.** ಮಾತಿನಲ್ಲಿ ಕೇವಲ ಶಭ್ಧಾರ್ಥ–ಜೀವರ್ಥಗಳನ್ನಲ್ಲದೆ ಉದ್ದೇಶಗಳನ್ನು ಸಂವೇದನೆಗಳನ್ನು ಗ್ರಹಿಸದೆ, **ಪದಗಳಿಗೆ ಅರ್ಥ ಹುಡುಕುವ ಬದಲಿಗೆ ಪದಗಳ ಹಿಂದಿನ ಭಾವನೆಗಳಿಗೆ ಅರ್ಥ ಹುಡುಕಿದರೆ** ಮಾತು ಸ್ವಾರಸ್ಯಕರವಾಗಿರುತ್ತದೆ, ಇಲ್ಲವೆ **ಮಾತುಗಳ ಕಠೋರತೆ ಸಾವಿನ ಮನೆಗೂ ಕರೆದೊಯ್ಯುತ್ತದೆ.** ಬಂಧುಗಳೇ, ನಾವು ಸಶಕ್ತ ಸಮಾಜ ಕಟ್ಟುವ ಮತ್ತು ಸರ್ವಾಂಗೀಣ ಅಭಿವೃದ್ಧಿ ಬಯಸುವ ವಿಶಾಲವಾದ ಆಶಯ ಹೊಂದಿದ್ದೆ ಆದರೆ ನಮ್ಮ **ಮಾತುಗಳು ಲಕ್ಷ ಕಂಠಗಳಲ್ಲಿ ಪ್ರತಿಧ್ವನಿಸುವಂತಿರಬೇಕು,** ಹೃದಯಗಳನ್ನು ಬಡಿದೆಬ್ಬಿಸುವಂತಿರಬೇಕು. ಅಂತಹ ಪ್ರಖರ ಮಾತಿನ ವಾಗ್ಮಿಗಳು ನೀವಾಗಬೇಕು. ಎಂಬುದೇ ನನ್ನ ಆಶಯ.

**ಪ್ರತಿಯೊಂದು ಮಾತಿಗೂ ಭೂತ, ವರ್ತಮಾನ, ಭವಿಷ್ಯಗಳ ಸಂಬಂಧ ಇದ್ದೇ ಇರುತ್ತದೆ. ಪ್ರೀತಿ ತುಂಬಿದ, ಭಾವನಾಯುಕ್ತವಾದ ಮಾತುಗಳಿಂದ ಮಾತ್ರವೇ ಮನುಷ್ಯರಲ್ಲಿನ ಸಂಬಂಧಗಳನ್ನು ಗಟ್ಟಿಗೊಳಿಸಬಹುದು.** ಮಾತುಗಳು ಅರ್ಥ ತಪ್ಪಿದರೆ ಸಂಬಂಧಗಳು ಘಾಸಿಯೂ ಆಗಬಹುದು. ಮಾತುಗಳು ಭಾಂದವ್ಯವನ್ನು ಬೆಸೆಯುತ್ತದೆ ಎಂಬುದನ್ನು ಎಂದಿಗೂ ಮರೆಯುವಂತಿಲ್ಲ. ಆದರೆ ಇಂದು **ಮನೆ ಮನೆಯಲ್ಲಿ ಅಕ್ಷರ ಜ್ಞಾನ ಹೆಚ್ಚಾಗಿದೆ. ಅರ್ಥ ಮಾಡಿ ಕೊಳ್ಳುವ ಮನಸ್ಥಿತಿ ಕಡಿಮೆ ಆಗಿದೆ. ಮಾತು ಮಾತಿಗೆ ನಾನೇನು ಕಡಿಮೆ ಎನ್ನುವ ಮಟ್ಟಿಗೆ ವಾದಗಳನ್ನು ನಡೆಸಿ–ವಿವಾದಗಳನ್ನು ಸೃಷ್ಟಿಸಿಕೊಂಡು** ಮನೆಯಲ್ಲಿದ್ದು ಮುಖ ತಿರುಗಿಸಿಕೊಂಡು ಇರುವಂತಹವರ ಸಂಖ್ಯೆ ಹೆಚ್ಚಾಗುತ್ತಿದೆ. ನಾವು ಚಂದ್ರ–ಅಂತರಿಕ್ಷಗಳ ಜೊತೆ ಸಂಬಂಧಗಳನ್ನು ಬೆಸೆಯುವುದನ್ನು ಕಾಣುತ್ತಿದ್ದೇವೆ, ಆದರೆ ಭೂಮಿಯ ಮೇಲಿರುವ ನಮ್ಮ ಸಂಬಂಧಗಳನ್ನು ಮರೆಯುತ್ತಿದ್ದೇವೆ. ಯಾವುದೇ ಒಂದು ಮನೆ ಗಟ್ಟಿಯಾಗಿ ಉಳಿಯಬೇಕಾದರೆ ಮೊದಲು ಬುನಾದಿ ಸದೃಢವಾಗಿರಬೇಕು. ಹಾಗೆಯೇ **ಯಾವುದೇ ಸಂಬಂಧಗಳು ಗಟ್ಟಿಯಾಗಿ ಉಳಿಯಬೇಕಾದರೆ ನಾವು ವ್ಯಕ್ತಪಡಿಸುವ ಭಾವನೆಗಳು ಶುದ್ಧವಾಗಿರಬೇಕು.** ಇತ್ತೀಚಿನ ವರ್ಷಗಳಲ್ಲಿ ಕೇವಲ ಮಾತುಗಳಿಂದಲೇ ಸಾವಿರಾರು ಕುಟುಂಬಗಳಲ್ಲಿ ಒಡಕು ಮೂಡಿ ಜೀವನ ಭರ್ಬರವಾಗಿದೆ. ಎಷ್ಟೋ **ಯುವ ದಂಪತಿಗಳು ಮಾತು–ಕೃತಿಗಳಗೆ ಅರ್ಥಗಳನ್ನು ಹುಡುಕುತ್ತಾ ಭಾವನೆಗಳಿಗೆ ಮಾನ್ಯತೆ ನೀಡದೆ ಧುಮ್ಮಿಕ್ಕುವ ಜಲಧಾರೆಯಂತೆ ಮಾತಾಡಿ ಮಾತಾಡಿ,** ಒಂದಾಗಿ ಬಾಳಿ ಬೇಳಗಬೇಕಾದ ಮನೆಯಲ್ಲಿಯೇ **ಕತ್ತಲೆಯ ಜೀವನ ನಡೆಸುತ್ತಿದ್ದಾರೆ.** ಇನ್ನೂ ಕೆಲವರು ಒಳ್ಳೆಯ ವಾಗ್ಮಿಗಳಾಗಿ ಸಮಾಜದ ನಾನಾ ಸ್ತರಗಳಲ್ಲಿ ಸೈ ಎನಿಸಿಕೊಂಡರೂ ಸಹ ತಮ್ಮ ಕುಟುಂಬದಲ್ಲಿ ಅಹಂಕಾರದ ಮಾತುಗಳನ್ನಾಡುವ ಮೂಲಕ ತಮ್ಮ ಜೀವನಕ್ಕೆ ತಾವೇ ಮುಳುವಾಗುತ್ತಾರೆ. **ಮಾತುಗಳು ಸಂಬಂಧಗಳನ್ನು ಉಳಿಸಿ ಬೆಳೆಸುವ ಅಮೃತಧಾರೆಯಾದಾಗ ಮಾತ್ರ ನಮ್ಮ ಮಾತುಗಳಿಗೆ ವಿಶ್ವಮಾನ್ಯತೆ ಇರುತ್ತದೆ.**



ಒಂದೊಂದು ಬಾರಿ ಬದುಕಿನ ಬಂಡಿ ಸಹಜವಾಗಿದ್ದರೂ ಕೃತಕವೆನಿಸತೊಡಗುತ್ತದೆ. ಮೆಚ್ಚುಗೆಯ ಮಾತಿಗೂ ಒಂದು ಅನುಮಾನ ಕಾಡುತ್ತದೆ. **"ನಾವೆಲ್ಲ ಈಗ ಕಾಣುವುದಿಲ್ಲ"** ಎಂದು ಕಾಡುವ ಮಾತನ್ನು ಆಗಾಗ ಸಂಗಾತಿಗಳಿಗೆ ಚುಚ್ಚುತ್ತೇವೆ, ಆದರೆ ಇಂತಹ ಚುಚ್ಚು ಮಾತುಗಳಿಂದ, ಅನುಮಾನಗಳಿಂದ, ಅವಮಾನಗಳಿಂದ ಬಾಂಧವ್ಯ ಗಟ್ಟಿಯಾಗಿ ಉಳಿಯಬಹುದೇ? ಇದು ನಂಬಿಕೆಯ ಬುನಾದಿಗೆ ಬೀಳುವ ಪೆಟ್ಟು ಅಲ್ಲವೇ? **ಪ್ರತಿಸಲವು ಇಂತಹ ಅನುಮಾನ, ಅವಮಾನಗಳನ್ನು ಅನುಭವಿಸುವುದಾದರೆ ಆ ಸಾಂಗತ್ಯವೇ ಬೇಡವೆನಿಸುವ ಸಾಧ್ಯತೆಗಳಿರುತ್ತದೆ. ಅಲ್ಲವೇ?** ನಮ್ಮ ಕಣ್ಣು ಚೆನ್ನಾಗಿದ್ದರೆ ಇಡೀ ಜಗತ್ತು ನಮಗೆ ಚೆನ್ನಾಗಿ ಕಾಣುತ್ತದೆ. ಅದೇ ನಮ್ಮ ನಾಲಿಗೆ ಚೆನ್ನಾಗಿದ್ದರೆ ಇಡೀ ಜಗತ್ತಿಗೆ ನಾವು ಚೆನ್ನಾಗಿ ಕಾಣುತ್ತೇವೆ. **ಬೀಗಿ ಬದುಕುವುದಕ್ಕಿಂತ ಬಾಗಿ ಬದುಕಿದರೆ ಸಾರ್ಥಕ ಬದುಕು ನಮ್ಮದಾಗುತ್ತದೆ.**

ಯಾವುದೇ ಸಮಸ್ಯೆಗಳನ್ನು ನಿಭಾಯಿಸುವುದು ಕಷ್ಟವೇನಲ್ಲ. ಆದರೆ ಪರಿಹಾರದ ಮಾತುಗಳು ಆಯಾ ಸಂದರ್ಭ ಮತ್ತು ಸಂಬಂಧಗಳ ತೀವ್ರತೆಯನ್ನು ಅವಲಂಭಿಸಿರುತ್ತದೆ. ಪ್ರತಿ ಸಂಬಂಧಕ್ಕೂ ನಂಬಿಕೆಯೊಂದಿಗೆ, ಕ್ಷಮೆಯು, ಕ್ಷಮೆಯೊಡನೆ ಮರೆವು ಇರುತ್ತದೆ. ಅವಮಾನ ಅನುಮಾನಗಳು ಮೀರಿ ಬೆಳೆಯ ಬಾರದು ಅಷ್ಟೇ. ಸಂಬಂಧಗಳನ್ನು ಒಂದು ಸೂತ್ರದಿಂದ ಬಂಧಿಸಲು ಸಾಧ್ಯವಿಲ್ಲ, ಒಂದು ಚೌಕಟ್ಟಿನಲ್ಲಿ ಹಿಡಿದಿಡುವುದು ಸಾಧ್ಯವಿಲ್ಲ. **ಸಂಬಂಧಗಳಿಗೆ ಸಾವಿರಾರು ರೂಪ ಸಂಬಂಧಗಳ ಅಂತರಂಗವನ್ನು ತಿಳಿದು ಮಾತನಾಡಿದರೆ ಸಂಬಂಧದ ಮೌಲ್ಯ ಹೆಚ್ಚುತ್ತದೆ.** ಸಂಬಂಧ ಎಂದರೆ **ನಾನು ಎಂಬ ಒಂಟಿತನ ಹೋಗಲಾಡಿಸಿ, ನಾವು ಎಂಬ ಭರವಸೆಯ ಭಾವ ಮೂಡಿಸುವುದು.** ನಮ್ಮ ಮನೆ, ನಮ್ಮ ಸಮಾಜ, ನಮ್ಮ ಪ್ರಪಂಚ ಸುಂದರವೆನಿಸುವುದು ನಾವು ರೂಢಿಸಿಕೊಳ್ಳುವ ನಿಜವಾದ ಸಂಬಂಧಗಳಿಂದ, ಇಂತಹ ಸಂಬಂಧಗಳು ಶಾಶ್ವತವಾಗಿ ವೃದ್ಧಿಸಲು ಪ್ರಮುಖವಾದದ್ದು ನಾವು ನುಡಿಯುವ ಮಾತುಗಳು. **ನಮ್ಮ ಮಾತುಗಳು ನಮ್ಮೊಳಗೆ ವೈರತ್ವವನ್ನು ಅಥವಾ ಹತಾಶೆಯನ್ನು ಉಂಟುಮಾಡುವ ಬದಲು ಪ್ರೀತಿ ವಿಶ್ವಾಸಗಳನ್ನು ಹರಿಸುವಂತಿರಬೇಕು.** ನಮ್ಮ ಸಮಸ್ಯೆಗಳ ಗಾತ್ರವು ನಮ್ಮ ಸಾಮರ್ಥ್ಯಕ್ಕೆ ಹೋಲಿಸಿದರೆ ಏನೂ ಅಲ್ಲ, ಆದರೆ, ನಾವು ನಮ್ಮ ಸಮಸ್ಯೆಗಳನ್ನು ಅಂದಾಜು ಮಾಡುವುದರಲ್ಲಿ ತಪ್ಪುತ್ತೇವೆ. ಅನ್ಯಥಾ ಮನಸ್ತಾಪಗಳಿಗೆ ನಾಂದಿ ಹಾಡುತ್ತೇವೆ. ಎರಡೇ ಎರಡು ಅಕ್ಷರಗಳ **"ಮಾತು"** ಜೀವನವನ್ನು ಮುಗಿಲೆತ್ತರಕ್ಕೆ ಕೊಂಡೊಯ್ಯುವ ಶಕ್ತಿ ಹೊಂದಿದೆ, ಮಾತು ಅರ್ಥ ತಪ್ಪಿದರೆ ಜೀವನಕ್ಕೆ ನೆಲೆ–ಬೆಲೆ ಇಲ್ಲದಂತೆ ಮಾಡುವ ಶಕ್ತಿಯನ್ನು ಹೊಂದಿದೆ. ನಾವು ಏನಾಗುತ್ತೇವೆಂಬುದು, ನಮ್ಮ ಮಾತುಗಳಿಂದಲೇ ಸಮಾಜಕ್ಕೆ ತಿಳಿಯುತ್ತದೆ.

ಬಂಧುಗಳೇ **ಜಗತ್ತಿಗೆ ಬಂದು ಹೋಗುವ ಅತಿಥಿಗಳು ನಾವು, ಭೂಮಿಗೆ ಬಂದಾಗ ಗುರುತಿಸುವವರು ಯಾರೂ ಇಲ್ಲ. ಭೂಮಿಯನ್ನು ಬಿಟ್ಟಾಗ ವಿಶ್ವ ನಮ್ಮನ್ನು ಗುರುತಿಸುವಂತಹ ಸಾಧನೆಯನ್ನು ಮಾಡಿ ಹೋಗಬೇಕಾದ್ದು ನಮ್ಮ ಕರ್ತವ್ಯ,** ಬನ್ನಿ ಅನಾವಶ್ಯಕವಾದ, ಬೇಜವಾಬ್ದಾರಿಯುತ, ಅನುಮಾನದ, ಅಸಹ್ಯದ ಅನಾಗರೀಕತನದ ಮಾತುಗಳಿಗೆ ಇತಿಶ್ರೀ ಹಾಡಿ **ಸುಂದರ ಬದುಕು ರೂಪಿಸುವ ಹಾಗೂ ಉಜ್ವಲ ಭವಿಷ್ಯ ನೀಡುವ ಅಮೃತಧಾರೆಯಂತಹ ಮಾತುಗಳನ್ನು ಆಡುತ್ತಾ ಮಾತಿಗೂ–ಸಂಬಂಧಗಳಿಗೂ ಅರ್ಥ ಕೊಡೋಣ** ಎಂದು ಪ್ರಾರ್ಥಿಸುತ್ತಾ ಮುಂದಿನ ಸಂಚಿಕೆಯಲ್ಲಿ ಭೇಟಿಮಾಡಲಿಚ್ಛಿಸುವ,

**ರಾ ಪ ರವಿಶಂಕರ್**, ಅಧ್ಯಕ್ಷರು

# ವಾಸವಿ ಅಕಾಡಮಿ

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
Email: vasaviacademy1915@gmail.com Website: https://vasaviacademy.com/ Ph: **8073499217**

5ನೇ ಬ್ಯಾಚ್

VASAVI academy

## IAS, IPS, KAS ಕನಸು ಹೊಂದಿರುವ ವಿದ್ಯಾರ್ಥಿಗಳಿಗೆ
## ಸುವರ್ಣ ಅವಕಾಶ

ಮಹಾಸಭೆಯ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಸವಿ ಅಕಾಡೆಮಿಗೆ ಪ್ರವೇಶ ಪಡೆಯಲು ಅವಕಾಶವಿದೆ. ಅಕಾಡೆಮಿ ಪ್ರವೇಶ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಂದ ಉತ್ತೀರ್ಣವಾಗುವ ವಿದ್ಯಾರ್ಥಿಗಳಿಗೆ ಸಂಪೂರ್ಣ ಉಚಿತ ಶಿಕ್ಷಣವಿರುತ್ತದೆ.

**ಇತರ ವಿದ್ಯಾರ್ಥಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ಪ್ರವೇಶ ನೀಡಲಾಗುತ್ತದೆ.**

### Highlights of the Program

- Coaching from Experienced & Established Faculties.
- Coaching will be completely in English Medium.
- Coaching is for both General Studies and Optional subjects.
- Duration of the coaching will be Eight to Nine months.
- Integrated Prelims & Mains tests series with Expert Evaluation.
- Frequent Motivational lectures from Eminent Personalities.
- Personal mentorship by serving and retired Civil Servants.
- Digital class room with projector and Audio Visual systems.
- Free digital Library access with Wi-Fi facility.
- Free seats are only for those who clear the Screening test.
- Free seats are open to All Community students.

Concessional and Payment seats are also available to those who couldn't secure high ranks in the screening test.

### Who can Apply?

- Applicant must be a Graduate or in Final Semester of Graduation.
- Must be eligible to appear for UPSC - Civil Services Exam 2024.
- Must not be a Working Professional (either part / full time).
- Must be committed to prepare full time for One Full Year.
- Must sign an Undertaking abiding by the rules of the Academy.

**Scan the QR code for Application**

**For More Details Please Join our Telegram Group**

**Screening Test Date is 2nd of July 2023**

**LAST DATE FOR SUBMITTING YOUR APPLICATION IS 25th OF JUNE 2023**

ADTV

---

**ಮಾನ್ಯ ಸದಸ್ಯರೇ,**

## ನಿಮ್ಮ ವಿಳಾಸದಲ್ಲಿ ಬದಲಾವಣೆ ಬೇಕೆ?
## ದೂರವಾಣಿ ಸಂಖ್ಯೆ ನಮೂದಿಸಬೇಕೆ?
## ಹಾಗಾದರೆ ನಿಮಗೊಂದು ಸುವರ್ಣಾವಕಾಶ

ತಾವು ಅಥವಾ ತಮ್ಮ ಸ್ನೇಹಿತರು/ಕುಟುಂಬ ವರ್ಗದವರು ಮಹಾಸಭೆ ಸದಸ್ಯರಾಗಿದ್ದು, ತಮಗೆ ಮಾಸಿಕ **ವಾರ್ತಾಪತ್ರ ಬರುತಿಲ್ಲವಾದರೆ, ವ್ಯಾಟ್ಸ್ಆ್ಯಪ್ ಮೂಲಕ ಮಾಹಿತಿಗಳು ದೊರೆಯುತ್ತಿಲ್ಲವಾದರೆ ನಿಮ್ಮ ವಿಳಾಸದಲ್ಲಿ ಬದಲಾವಣೆ** ಮಾಡಿಕೊಳ್ಳಬೇಕಾಗಿದ್ದಲ್ಲಿ **ನಿಮಗೇ ಅವಕಾಶ ಮಾಡಿಕೊಡಲಾಗಿದೆ.** ನಿಮ್ಮ ಮೊಬೈಲ್ ಮೂಲಕವೇ, ನೀವು ಇರುವೆಡೆಯಿಂದಲೇ ಅವಶ್ಯಕ ಬದಲಾವಣೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ.

**1.** ಸದಸ್ಯತ್ವದ ಸಂದರ್ಭದಲ್ಲಿ ಮೊಬೈಲ್ ಸಂಖ್ಯೆ ನೀಡಿದ್ದರೆ ಬದಲಾವಣೆಗಳಿಗಾಗಿ ಈ ರೀತಿ ಮಾಡಿ

**> Go to Google Chrome - Search for kavms.com in that select - Membership Button - select Update Address in that Type your respective Life Membership Number and Phone number then Submit.**

**Submit** ಆದ ನಂತರ ನಿಮ್ಮ ರಿಜಿಸ್ಟರ್ ಮೊಬೈಲ್ ನಂಬರ್‌ಗೆ ಬಂದಿರುವಂತಹ **OTP**ಯನ್ನು **ENTER** ಮಾಡಿ ನಿಮ್ಮ ವಿಳಾಸವನ್ನು ಬದಲಾಯಿಸಿಕೊಳ್ಳಬಹುದು

**ಅಥವಾ**

**2.** ಒಂದು ವೇಳೆ ನಿಮ್ಮ ಸದಸ್ಯತ್ವದೊಂದಿಗೆ ನಿಮ್ಮ ಮೊಬೈಲ್ ಸಂಖ್ಯೆ ಇಲ್ಲವಾದಲ್ಲಿ ಬದಲಾವಣೆಗಾಗಿ ಈ ರೀತಿ ಮಾಡಿ.

**> Go to Google Chrome - Search for kavms.com in that select - Membership Button - select Download address update form Application** ಅನ್ನು **Download** ಮಾಡಿಕೊಂಡು, **Print** ತೆಗೆದುಕೊಂಡು ಕೇಳಿರುವ ಮಾಹಿತಿಯನ್ನು ಬರೆದು ಮಹಾಸಭಾ **Address** ಗೆ ಪೋಸ್ಟ್ ಮೂಲಕ ಕಳುಹಿಸಿಕೊಡಲು ಕೋರಿದೆ.

---

## ವಾಸವಿ ಎಜುಕೇಷನ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ

ನಂ 16, ಶೇಷಾದ್ರಿ ರಸ್ತೆ ಗಾಂಧಿನಗರ, ಬೆಂಗಳೂರು–09, ಮೊಬೈಲ್ ಸಂಖ್ಯೆ 9663900439

### ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿ ಶಿಕ್ಷಣ ಸಂಸ್ಥೆ ನಿರ್ಮಾಣ ಮಾಡುವ ಬಗ್ಗೆ ನಮ್ಮ ಬಂಧುಗಳ ಹಲವಾರು ವರ್ಷಗಳ ಕನಸು ಈಗ ಶ್ರೀ ವಾಸವಿ ಎಜುಕೇಷನ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ ಸ್ಥಾಪಿನೆಯ ಮೂಲಕ ಕನಸು ನನಸಾಗುವ ಕಾಲ ಸನ್ನಿಹಿತವಾಗಿದೆ. ಶಿಕ್ಷಣ ಸಹಕಾರ ಸಂಘಕ್ಕೆ ಸದಸ್ಯರಾಗಲು ಮುಕ್ತವಾದ ಅವಕಾಶ ನೀಡಲಾಗಿದೆ. ಮಹಾಸಭೆಯ ಕಾರ್ಯಕಾರಿ ಸಮಿತಿ ಸದಸ್ಯರು ಅಥವಾ ಜಿಲ್ಲಾ ಸಮಿತಿ ಅಧ್ಯಕ್ಷರು/ಕಾರ್ಯದರ್ಶಿಗಳನ್ನು ಸಂಪರ್ಕಿಸಿ, ಅರ್ಜಿ ಪಡೆದುಕೊಂಡು ಸದಸ್ಯರಾಗಲು ಕೋರಿದೆ.

**ದಿನಾಂಕ 30–7–2023ರ ಒಳಗೆ ತಮ್ಮ ಸದಸ್ಯತ್ವವನ್ನು ನೋಂದಾಯಿಸಿಕೊಳ್ಳಲು ಅವಕಾಶವಿದೆ.**

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152